# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 292 |
| ಸದಸ್ಯರ ಹೆಸರು | ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | 18.07.2024. |
| ಉತ್ತರಿಸಬೇಕಾದ ಸಚಿವರು | ಸನ್ಮಾನ್ಯ ಮುಖ್ಯಮಂತ್ರಿಯವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಚಾಮರಾಜನಗರ ಜಿಲ್ಲೆಯಲ್ಲಿ ಅಸ್ತಿತ್ವದ ಅಳಿವಿನಂಚಿನಲ್ಲಿರುವ ಬುಡಕಟ್ಟು ಡೊಂಗ್ರಿ ಗರಾಸಿಯ ಜನಾಂಗದ ಒಟ್ಟು ಎಷ್ಟು ಕುಟುಂಬಗಳಿವೆ; ಈ ಕುಟುಂಬಗಳಲ್ಲಿ ಜಮೀನು ಮತ್ತು ಪಕ್ಕಾಮನೆ ಇರುವ ಕುಟುಂಬಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು) | ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಮಾತ್ರ ಡೊಂಗ್ರಿ ಗರಾಸಿಯ ಜನಾಂಗದವರು ವಾಸಿಸುತ್ತಿರುತ್ತಾರೆ.<br>• ಒಟ್ಟು ಕುಟುಂಬಗಳ ಸಂಖ್ಯೆ - 40<br>• ಜಮೀನು ಹೊಂದಿರುವ ಕುಟುಂಬಗಳ ಸಂಖ್ಯೆ-0<br>• ಪಕ್ಕಾಮನೆ ಇರುವ ಕುಟುಂಬಗಳ ಸಂಖ್ಯೆ -37 |
| ಆ) | ಕಡಿಮೆ ಜನಸಂಖ್ಯೆ ಇರುವ ಬುಡಕಟ್ಟು ಡೊಂಗ್ರಿ ಗರಾಸಿಯ ಜನಾಂಗವು ಕನಿಷ್ಟ ಮೂಲಭೂತ ಸೌಲಭ್ಯ ಮತ್ತು ಸರ್ಕಾರಿ ಸೌಲಭ್ಯಗಳಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳಾವುವು? (ವಿವರ ನೀಡುವುದು) | ಹೌದು,<br>ಗುಂಡ್ಲುಪೇಟೆ ತಾಲ್ಲೂಕಿನ ನೇನೆಕಟ್ಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪಂಜನಹಳ್ಳಿಯಲ್ಲಿ ಡೊಂಗ್ರಿ ಗರಾಸಿಯ ಜನಾಂಗದವರಿಗೆ ಸರ್ಕಾರದ ವತಿಯಿಂದ ಹೊಸಮನೆಗಳನ್ನು ನಿರ್ಮಾಣ ಮಾಡಲು ಹಾಗೂ ಇತರೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ರೂ.178.70ಲಕ್ಷಗಳ ಅನುದಾನವನ್ನು ಈ ಕೆಳಕಂಡಂತೆ ಬಿಡುಗಡೆ ಮಾಡಲಾಗಿದೆ.<br>• 37ಮನೆಗಳ ನಿರ್ಮಾಣಕ್ಕೆ ರೂ.3.50 ಲಕ್ಷಗಳಂತೆ ಒಟ್ಟು ರೂ. 129.50 ಲಕ್ಷಗಳು ವೆಚ್ಚವಾಗಿದೆ.<br>• ರೂ.12.20 ಲಕ್ಷಗಳ ವೆಚ್ಚದಲ್ಲಿ ವಿದ್ಯುತ್ ಕಾಮಗಾರಿ ಪ್ರಗತಿಯಲ್ಲಿದೆ.<br>• ಕುಡಿಯುವ ನೀರಿನ ಕಾಮಗಾರಿ ಕೈಗೊಳ್ಳಲು ರೂ. 25.00 ಲಕ್ಷಗಳನ್ನುನಿಗಧಿಪಡಿಸಲಾಗಿದೆ.<br>• ರೂ.12.00 ಲಕ್ಷಗಳಲ್ಲಿ ಅನುದಾನದಲ್ಲಿ ಸಮುದಾಯ ಭವನವನ್ನು ನಿರ್ಮಾಣ ಮಾಡಲಾಗಿದೆ. |

ಕಡತ ಸಂಖ್ಯೆ: STW/SECB/SAD/105/2024

(ಸಿದ್ದರಾಮಯ್ಯ)
ಮುಖ್ಯಮಂತ್ರಿ